# ವಾರ್ಡ್ ಸಭೆ ಸಂಖ್ಯೆ.26

ದಿನಾಂಕ:.18.01.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
2. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
3. ಕುಮಾರಿ ಕಮಲ ಸದಸ್ಯರು.
4. ಶ್ರೀ ರಾಜೇಶ್ ಸದಸ್ಯರು.
5. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
6. ಶ್ರೀ ನಾಗೇಂದ್ರ ಸದಸ್ಯರು.
7. ಶ್ರೀಮತಿ ಮಮತ ಕಿರಣ್ ಆರೋಗ್ಯ ವೈದ್ಯಾಧಿಕಾರಿಗಳು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
8. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
9. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ನಿಂಗರಾಜ ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
11. ನಂದಿನಿ ಲೇಔಟ್ ಪೋಲೀಸ್ ಠಾಣೆಯ ಅಧಿಕಾರಿ.
12. ಮಹಾಲಕ್ಷ್ಮೀ ಲೇಔಟ್ ಠಾಣೆಯ ಅಧಿಕಾರಿ.
13. ಶ್ರೀ ರಾಜೇಶ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸದಸ್ಯರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರದ ಆರೋಗ್ಯ ವೈದ್ಯಾಧಿಕಾರಿಗಳು ಶ್ರೀಮತಿ ಡಾ॥ ಮಮತ ಕಿರಣ್ ರವರು ಮಾಹಿತಿ ನೀಡಿದರು. | – |
| 4. | ಕುಮಾರಿ ಕಮಲ ಸದಸ್ಯರು ರವರು 3ನೇ ಮುಖ್ಯ ರಸ್ತೆ, ವಿಜಯಾನಂದ ನಗರ ಇಲ್ಲಿ ಮರ ಬೀಳುವ ಸ್ಥಿತಿಯಲ್ಲಿರುತ್ತದೆ ಆದ್ದರಿಂದ ತೆರವುಗೊಳಿಸಿ ಎಂದು ಕೋರಿರುತ್ತಾರೆ. ಇದಕ್ಕೆ ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ಸೂಚಿಸಿಸಲಾಗುವುದು ಎಂದು ತಿಳಿಸಿದರು. | – |
| 5. | ಶ್ರೀ ಬಿ.ಆರ್ ಪುಟ್ಟಸ್ವಾಮಿ ರವರು ರಕ್ಷ ಆಸ್ಪತ್ರೆ ಹತ್ತಿರ ಇರುವ ಬ್ಲಾಕ್ ಸ್ಪಾಟ್ ಅನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಿರಿಯ ಅಭಿಯಂತರರು ತೆರವುಗೊಳಿಸಲಾಗುವುದು ಎಂದು ತಿಳಿಸಿದರು. | – |
| 6. | ಶ್ರೀ ಬಿ.ಆರ್ ಪುಟ್ಟಸ್ವಾಮಿ ರವರು ಬೋರೇಗೌಡರ ಮನೆಯ ಹತ್ತಿರ ಕಸದ ಆಟೋ ಹೋಗುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ರಸ್ತೆ ಕಿರಿದಾಗಿದ್ದು ವಾಹನಗಳನ್ನು ನಿಲ್ಲಿಸಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಪ್ರಸ್ಥಾಪಿತ ಸ್ಥಳಕ್ಕೆ ಆಟೋ ಕರಿಸಿ ಪರಿವೀಕ್ಷಣೆ ಮಾಡಲು ಸೂಚಿಸಿದರು. | – |
| 7. | ಶ್ರೀ ನಾಗೇಂದ್ರ ಸದಸ್ಯರು ರವರು ಮಾರ್ಷಲ್‌ಗಳಿಗೆ ದಂಡ ವಿಧಿಸಿರುವ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಶ್ರೀ ರಾಜೇಶ್ ಮಾರ್ಷಲ್ ರವರು ದಂಡಗಳನ್ನು ವಿಧಿಸಿ ಕರೋನ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿರುತ್ತೇವೆ ಎಂದು ತಿಳಿಸಿದರು. | – |
| 8. | ಶ್ರೀ ನಾಗೇಂದ್ರ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳು ಇದ್ದು ಸದರಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವುದರ ಯೋಜನೆಯನ್ನು ನೀಡುವಂತೆ ಕೋರಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು. | – |
| 9. | ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು ರವರು ಅಗ್ನಿಶಾಮಕ ಕೇಂದ್ರದ ರಸ್ತೆಯಲ್ಲಿ ಚರಂಡಿ ಹೂಳು ತೆಗೆಯುತ್ತಿರುವ ಕಾಮಗಾರಿಯನ್ನು ನಿಲ್ಲಿಸಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಹೂಳು ತೆಗೆಯುವ ಕಾಮಗಾರಿಯನ್ನು ಮುಂದುವರೆಸಲು ಸೂಚಿಸಲಾಗುವುದು ಎಂದು ತಿಳಿಸಿದರು. | – |

Scanned with CamScanner

| | | |
|---|---|---|
| 10. | ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು ರವರು ಸಿಸಿ ಕ್ಯಾಮರಗಳ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಈಗಾಗಲೇ ವಾರ್ಡ್ ವ್ಯಾಪ್ತಿಯ ಪೋಲೀಸ್ ಠಾಣಾಧಿಕಾರಿಗಳಿಗೆ ಸಿಸಿ ಕ್ಯಾಮರಗಳನ್ನು ಅಳವಡಿಸಲು ಅವಶ್ಯಕವಿರುವ ಸ್ಥಳಗಳನ್ನು ಪಟ್ಟಿ ಮಾಡಿ. ಈ ಕಛೇರಿಗೆ ನೀಡಲು ಕೋರಲಾಗಿದೆ ಹಾಗೂ ಆರ್.ಎಂಸಿ ಯಾರ್ಡ್ ಪೋಲೀಸ್ ಠಾಣೆಯಿಂದ ಸ್ಥಳಗಳನ್ನು ಗುರುತಿಸಿ ಪಟ್ಟಿಯನ್ನು ನೀಡಿರುತ್ತಾರೆ ಎಂದು ತಿಳಿಸಿದರು. | – |
| 11. | ನಾಗೇಂದ್ರ ಸದಸ್ಯರು ರವರು ದಿನಬಂಧು ನಗರದ ಹತ್ತಿರ ಜೋತು ಬಿದ್ದಿರುವ ಕೇಬಲ್ಸ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಗಳನ್ನು ಕೋರಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ತೆರವುಗೊಳಿಸಲಾಗುವುದು ಎಂದು ತಿಳಿಸಿದರು. | – |
| 12. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

ಕಾರ್ಯದರ್ಶಿಗಳು

18/01/22

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner